**<u>2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಅಸಲು ದಾವೆ. ಸಂಖ್ಯೆ: 480/2023</u>**

ಪಿ.ಡಬ್ಲೂ:01 ಶ್ರೀ ಗುರುರಾಜ

**ಸಾಕ್ಷಿಯನ್ನು ದಿನಾಂಕಃ 13-10-2025 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**
**<u>ಪಾಟೀಸವಾಲು ಃ 3 ನೇ ಪ್ರತಿವಾದಿಯ ಪರ ಶ್ರೀ.ಎನ್ ಎಸ್ ವಕೀಲರಿಂದ</u>**

1. ಲಕ್ಷ್ಮಮ್ಮ ರವರು ನನ್ನ ತಾಯಿ ಆಗಿರುತ್ತಾರೆ. ನಾನು ಇಲ್ಲಿಯವರೆಗೆ ಸದರಿ ಲಕ್ಷ್ಮಮ್ಮ ರವರು ನನ್ನ ತಾಯಿ ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಮುಂದೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸದರಿ ನನ್ನ ತಾಯಿ ಆದ ಲಕ್ಷ್ಮಮ್ಮ ರವರು 2007 ನೇ ಸಾಲಿನಲ್ಲಿ ಮರಣ ಹೊಂದಿದ್ದು ಅವರ ಪ್ರಮಾಣ ಪತ್ರವನ್ನು ನಾನು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ನನ್ನ ತಾಯಿಯವರ ಮರಣಾ ನಂತರ ನಾನು ವಂಶವೃಕ್ಷವನ್ನು ಮಾಡಿಸಿಕೊಂಡಿರುವುದಿಲ್ಲ. ನನ್ನ ತಾಯಿಯವರಿಗೆ 5 ಜನ ಹೆಣ್ಣು ಮಕ್ಕಳಿದ್ದು 2 ಗಂಡು ಮಕ್ಕಳಿರುತ್ತಾರೆ. ಸದರಿ ನನ್ನ ಒಡಹುಟ್ಟಿದವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ.

2. ನಿಪಿ1 ಕ್ರಯ ಪತ್ರದಂತೆ ನನ್ನ ತಾಯಿಯವರ ಹೆಸರಿಗೆ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಮುಟೇಷನ್ ಆಗಿದೆಯಾ ಎಂದರೆ ಇಲ್ಲ. ನಿಪಿ 1 ರಲ್ಲಿ ನಮೂದು ಮಾಡಿದ ಸಾಬುಸಾಬ್ ರವರಿಗೆ ದಾವಾ ಆಸ್ತಿಯು ಯಾವ ರೀತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಅದು ಅವರ ಪಿತ್ರಾರ್ಜಿತ ಸ್ವತ್ತು ಎನ್ನುತ್ತಾರೆ. ಸದರಿ ವಿಚಾರವನ್ನು ತೋರಿಸುವ ಪೂರಕವಾದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಇಲ್ಲ. ಸದರಿ ಸಾಬುಸಾಬ್ ರವರ ಹೆಸರಿನಲ್ಲಿ ನನ್ನ ಪ್ರಕಾರ ಮೊದಲು ದಾವಾ ಆಸ್ತಿ ಬರುತ್ತಿತ್ತು ಎಂಬುವುದನ್ನು ತೋರಿಸಲು ಕಂದಾಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಇಲ್ಲ. 2007 ರಲ್ಲಿ ನನ್ನ ಪ್ರಕಾರ ನನ್ನ ತಾಯಿಯ ಮರಣಾ ನಂತರ ನಿಪಿ1 ರ ಬಗ್ಗೆ ನಮೂದು ಮಾಡಿ ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಮಾಡಿಸಲು ಸಂಬಂದ ಪಟ್ಟ ಕಂದಾಯ ಇಲಾಖೆಗೆ ಯಾವುದಾದರೂ ಅರ್ಜಿಯನ್ನು ನೀಡಿದ್ದೇವಾ ಎಂದರೆ ಇಲ್ಲ . ದಾವಾ ಆಸ್ತಿಯನ್ನು ಬಿಟ್ಟು ನನ್ನ ತಾಯಿಯವರಿಗೆ ಬೇರೆ ಊರಿನಲ್ಲಿ ಇನ್ನೊಂದು ಆಸ್ತಿ ಇರುತ್ತದೆ.

3. ನಾನು ಇಲ್ಲಿಯವರೆಗೆ ನಿಪಿ 1 ಕ್ಕೆ ಸಂಬಂದ ಪಟ್ಟಂತೆ ದಾವಾ ಆಸ್ತಿಯು ಮೊದಲು ನನ್ನ ಪ್ರಕಾರ ಸಾಬೂಖಾನ್ ಮತ್ತು ಸಾಬ್ಜು ಖಾನ್ ಸಾಬೂ ಸಾಬ್ ರವರ ಹೆಸರಿನಲ್ಲಿ ಇತ್ತು ಎಂಬುವುದನ್ನು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾವಾ ಆಸ್ತಿಯು ಸದರಿ ಸಾಬೂಖಾನ್ ಮತ್ತು ಸಾಬ್ಜು ಖಾನ್ ಸಾಬೂ ಸಾಬ್ ರವರಿಗೆ ಸೇರಿರಲಿಲ್ಲ ಮತ್ತು ಅವರು ದಾವಾ ಆಸ್ತಿಯನ್ನು ಮೊದಲು ಸ್ವಾಧೀನತೆಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಾಬೂಖಾನ್ ಮತ್ತು ಸಾಬ್ಜು ಖಾನ್ ಸಾಬೂ ಸಾಬ್ ರವರಿಗೆ ದಾವಾ ಆಸ್ತಿಯನ್ನು ನನ್ನ ತಾಯಿಯವರಿಗೆ ಮಾರಾಟ

ಮಾಡುವ ಯಾವುದೇ ಹಕ್ಕು ಅದಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ1 ನ್ನು ಮಾಡುವ ಸಂದರ್ಬದಲ್ಲಿ ನಾನು ಅಲ್ಲಿ ಹಾಜರಿರಲಿಲ್ಲ. ಸದರಿ ದಾವಾ ಆಸ್ತಿಯನ್ನು ನನ್ನ ತಾಯಿಯವರು ನನ್ನ ಪ್ರಕಾರ ನಿಪಿ1 ರಂತೆ ಖರೀದಿ ಮಾಡಿಲ್ಲ ಸುಳ್ಳು ಎಂದರೆ ಸರಿಯಲ್ಲ.

4. ಈಗ ದಾವಾ ಆಸ್ತಿಯ ಪಹಣಿಯು 3 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಹೆಸರು ಪಹಣಿಯಲ್ಲಿ ಮಾಲೀಕರು ಎಂದು ಬರಬೇಕಾದರೆ ಮೊದಲು ಮುಟೇಷನ್ ಆಗಬೇಕು ಎಂದರೆ ಸರಿ. ಸದರಿ 3 ನೇ ಪ್ರತಿವಾದಿಯ ಹೆಸರಿನಲ್ಲಿ ಎಂ ಟಿ 46/1985-86 ರಂತೆ ಮುಟೇಷನ್ ಆಗಿದೆ ಎಂದರೆ ಹೌದು. ನಿಪಿ2 ಮತ್ತು 3 ರಲ್ಲಿ 3 ನೇ ಪ್ರತಿವಾದಿಯ ಹೆಸರನ್ನು ಬ್ರಾಕೇಟ್ ನಲ್ಲಿ ಹಾಕಿ ಡಿ ಲಕ್ಷ್ಮಮ್ಮ ಎಂದು ನಮೂದು ಮಾಡಿದ್ದು ಯಾವ ಮುಟೇಷನ್ ಆದಾರದಲ್ಲಿ ಅದನ್ನು ಬರೆಯಲಾಗಿದೆ ಎಂದು ನಮೂದಿದೆಯಾ ಎಂದರೆ ಇಲ್ಲ. ನಾನು ನಿಪಿ2 ಮತ್ತು 3 ಪಹಣಿಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

5. ಸಾಮಾನ್ಯವಾಗಿ ಕೈ ಬರಹ ಪಹಣಿಗಳಲ್ಲಿ ನಮೂದಾಗಿರುವ ವಿಚಾರ ಸರಿಯಾಗಿ ಇದ್ದ ನಂತರ ಅದನ್ನು ಗಣಕೀಕೃತ ಪಹಣಿಯಲ್ಲಿ ಸಂಬಂದ ಪಟ್ಟ ಇಲಾಖೆಯವರು ನಮೂದು ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂದ ಪಟ್ಟಂತೆ 2001-02 ನೇ ಸಾಲಿನಿಂದ ಗಣಕೀಕೃತ ಪಹಣಿಯಲ್ಲಿ 3 ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಹೌದು. ದಾವಾ ಆಸ್ತಿ ಆದ ಸರ್ವೆ ನಂ. 15/2 ರ ಎಲ್ಲಾ ಕಡೆ 3 ನೇ ಪ್ರತಿವಾದಿಯ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ದಾವಾ ಆಸ್ತಿಯ ಪಶ್ಚಿಮ, ಉತ್ತರ, ಮತ್ತು ದಕ್ಷಿಣಕ್ಕಾದಂತೆ ನಮ್ಮ ಆಸ್ತಿ ಇರುತ್ತದೆ ಎನ್ನುತ್ತಾರೆ. ಸದರಿ ವಿಚಾರವನ್ನು ತೋರಿಸಲು ನಾನು ಇಲ್ಲಿಯವರೆಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿಯು ಇಲ್ಲ ಮುಂದೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ . ಸದರಿ ಸರ್ವೆ ನಂ.15/2 ಕ್ಕೆ ಸಂಬಂದ ಪಟ್ಟಂತೆ 2 ನೇ ಪ್ರತಿವಾದಿಗಳು ದಾಖಲೆಗಳನ್ನು ಪರಿಶೀಲಿಸಿ 3 ನೇ ಪ್ರತಿವಾದಿಯ ಹೆಸರನ್ನು ಗುರುತಿಸಿ ಅವಾರ್ಡ್ ಮಾಡಿರುತ್ತಾರೆ ಎಂದರೆ ಸರಿ.

6. ಸರ್ವೆ ನಂ 15/1, ದಾವಾ ಆಸ್ತಿ ಆದ ಸರ್ವೆ ನಂ.15/2 ಮತ್ತು ಸರ್ವೆ ನಂ.15/3 ನ್ನು 3 ನೇ ಪ್ರತಿವಾದಿಯು ಹುಸೇನ್ ಖಾನ್ ಮತ್ತು ಸತ್ತರ್ ಖಾನ್ ರವರಿಂದ ದಿಃ21.10.1985 ರಂದು ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. ಮೊದಲು ಸರ್ವೆ ನಂ.15/2 ಉಮ್ಮರ್ ಖಾನ್ ರವರ ಹೆಸರಿನಲ್ಲಿ ಖಾತೆ ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದಾವಾ ಆಸ್ತಿ ಆದ ಸರ್ವೆ ನಂ.15/2 ಕ್ಕೆ ಸಂಬಂದಿಸಿದ್ದು ಎಂದರೆ ಹೌದು ಎಂದು ಗುರುತಿಸುತ್ತಾರೆ. ಸದರಿ ದಾಖಲೆಯು ಕೈ ಬರಹ ಪಹಣಿಯ ದೃಡೀಕೃತ ಪ್ರತಿಯಾಗಿದ್ದು ಅದನ್ನು ಈಗ ನಿಡಿ 1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಉಮ್ಮರ್ ಖಾನ್ ಎಂದು ಹೆಸರಿದೆ ಎಂದರೆ ಹೌದು. ಸದರಿ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಯು 1985 ರಲ್ಲಿ ಖರೀದಿ ಮಾಡಿ ಅವರೇ ಸ್ವಾದೀನದಲ್ಲಿ ಇದ್ದು ಅದನ್ನು ಅನುಬೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ

7. ನನಗೆ ಸುಮಾರು 10 ವರ್ಷಗಳ ಹಿಂದೆ ದಾವಾ ಆಸ್ತಿಯ ಪಹಣಿಯು 3 ನೇ ಪ್ರತಿವಾದಿಯ ಹೆಸರಿನಲ್ಲಿ ಬರುವ ಬಗ್ಗೆ ನ ನಗೆ ಗೊತ್ತಾಗಿರುತ್ತದೆ. ಸದರಿ ವಿಚಾರಕ್ಕೆ ಸಂಬಂದ ಪಟ್ಟಂತೆ ನನ್ನ ಪ್ರಕಾರ 10 ವರ್ಷದ ಹಿಂದೆ ಗೊತ್ತಾದ ಬಳಿಕ ನಾನು ತಹಸೀಲ್ದಾರ್ ನ್ಯಾಯಾಲಯ, ಎಸಿ ನ್ಯಾಯಾಲಯದಲ್ಲಿ ಸದರಿ ಪಹಣಿಯನ್ನು ಪ್ರಶ್ನಿಸಿ ಅರ್ಜಿ ಏನಾದರೂ ಹಾಕಿದ್ದೇನಾ ಎಂದರೆ ಇಲ್ಲ. ಸದರಿ ನಿಪಿ1 ಕ್ರಯ ಪತ್ರವನ್ನು ಬಿಟ್ಟು ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ನನ್ನ ತಾಯಿಯವರ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ನನ್ನ ಪ್ರಕಾರ ನನ್ನ ತಾಯಿಯವರಿಗೆ 7 ಮಕ್ಕಳಿರುವ ಕಾರಣ ನನಗೆ ಒಬ್ಬನಿಗೆ ಈ ದಾವೆಯನ್ನು ಹಾಕುವ ಅದಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಹೂಡಿ 2 ನೇ ಪ್ರತಿವಾದಿಯ ಮುಂದೆ ತಕರಾರು ಮಾಡಿದ ಕಾರಣ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ 3 ನೇ ಪ್ರತಿವಾದಿಗೆ ಹಣ ಇನ್ನು ಬಿಡುಗಡೆ ಆಗಿಲ್ಲ ಎಂದರೆ ಸರಿ. ದಾವಾ ಆಸ್ತಿಯು 3 ನೇ ಪ್ರತಿವಾದಿಗೆ ಸೇರಿದ್ದರೂ ಸಹ ಆ ವಿಚಾರ ನನಗೆ ಗೊತ್ತಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಸಲುವಾಗಿ ನಾನು ಈ ಸುಳ್ಳು ದಾವೆಯನ್ನು 3 ನೇ ಪ್ರತಿವಾದಿಯ ವಿರುದ್ದ ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.15/3 ಮತ್ತು ದಾವಾ ಆಸ್ತಿಯು ಅಕ್ಕ ಪಕ್ಕ ಜಮೀನಾಗಿದ್ದು 3 ನೇ ಪ್ರತಿವಾದಿ ಅದನ್ನು ಉಳುಮೆ ಮಾಡುತ್ತಿದ್ದರು ಎನ್ನುತ್ತಾರೆ. ಸದರಿ ದಾವಾ ಆಸ್ತಿಯನ್ನು ಮತ್ತು ಸರ್ವೆ ನಂ15/3 ನ್ನುನ 2 ನೇ ಪ್ರತಿವಾದಿಯು ಸರ್ಕಾರಕ್ಕೆ ಅವುಗಳನ್ನು ತೆಗೆದುಕೊಂಡು ರಸ್ತೆ ಮಾಡಿರುತ್ತಾರೆ ಎಂದರೆ ಹೌದು.

8. ನನ್ನ ಪ್ರಕಾರ 3 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಸುಮಾರು 5-6 ವರ್ಷ ಉಳುಮೆ ಮಾಡುತ್ತಿದ್ದರು. ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಯು 1985 ರಲ್ಲಿ ಖರೀದಿ ಮಾಡಿ ಅದನ್ನು ಉಳುಮೆ ಮಾಡಿಕೊಂಡು ಬರುತ್ತಿದ್ದು ನಾನು ಮೇಲೆ ಹೇಳಿದಂತೆ 5-6 ವರ್ಷ ಅಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ 3 ನೇ ಪ್ರತಿವಾದಿಯು ಸುಮಾಾರು 5-6 ವರ್ಷ ಉಳುಮೆ ಮಾಡಿದ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದೇನಾ ಎಂದರೆ ಇಲ್ಲ. ನಾನು 3 ನೇ ಪ್ರತಿವಾದಿಗೆ ಈ ದಾವೆಯನ್ನು ಹೂಡಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಹಾಕಿರುವುದಿಲ್ಲ ಆದ ಕಾರಣ 1 ನೇ ಪ್ರತಿವಾದಿಯ ಪಾಟೀಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**Sd/-**
**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**